ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಶ್ರೀರಂಗಪಟ್ಟಣ

ಸಿಸಿ 32/2017 ಸಿಡಬ್ಲ್ಯೂ : 3 ಪಿ ಡಬ್ಲ್ಯೂ : 5

| | |
|---|---|
| ಹೆಸರು | ರಾಹುಲ್ ಕೆ. |
| ತಂದೆಯ ಹೆಸರು | ಕಾರ್ತಿಕೇಯನ್ |
| ವಯಸ್ಸು | 29 ವರ್ಷ |
| ವೃತ್ತಿ | ಖಾಸಗಿ ನೌಕರಿ |
| ವಾಸ | ಹೈದ್ರಾಬಾದ್ |

ದಿನಾಂಕಃ 22.04.2024 ರಂದು ಸಾಕ್ಷಿಗೆ ಪ್ರಮಾಣ ವಚನ ನೀಡಲಾಯಿತು.

ಮುಖ್ಯ ವಿಚಾರಣೆ ಎ ಪಿ ಪಿ ರವರಿಂದಃ

1. ಚಾಸಾ 1 ನನ್ನ ತಂದೆ, ಚಾಸಾ 2 ನನ್ನ ಚಿಕ್ಕಪ್ಪ. ಚಾಸಾ 4 ರಿಂದ 8, 11, 12, 14 ಮತ್ತು 16 ರವರ ಪರಿಚಯವಿದೆ. ಚಾಸಾ 9, 10, 13 ಮತ್ತು 15 ರವರ ಪರಿಚಯವಿಲ್ಲ.
2. ಲಿಂಗೇಶ್ ನನ್ನ ದೊಡ್ಡಮ್ಮನ ಮಗ ಮತ್ತು ಕಿರಣ್ ನನ್ನ ಚಿಕ್ಕಮ್ಮನ ಮಗ. ಅವರು ರಸ್ತೆ ಅಪಘಾತದಲ್ಲಿ ಮರಣ ಹೊಂದಿರುತ್ತಾರೆ. ಅಪಘಾತವಾದಾಗ ಕಿರಣ್ ಸುಮಾರು 11 ವರ್ಷವಾಗಿತ್ತು. ದಿಃ 11.03.2017 ರಂದು ನಾನು ಮತ್ತು ನನ್ನ ಕುಟುಂಬದವರು ಶ್ರೀರಂಗಪಟ್ಟಣಕ್ಕೆ ನಮ್ಮ ಅಜ್ಜಿಯ ಅಸ್ಥಿ ವಿಸರ್ಜನೆ ಬಂದಿದ್ದೆವು. ಬೆಳಗಿನ ಸುಮಾರು 5 ರಿಂದ 6 ಗಂಟೆಗೆ ಕಾರ್ಯ ಮುಗಿಸಿಕೊಂಡು ಸ್ವಿಫ್ಟ್ ಕಾರಿನಲ್ಲಿ ನಾನು, ಲಿಂಗೇಶ್, ಕಿರಣ್, ನನ್ನ ತಂದೆ ಮತ್ತು ಅರುಣ್ ಬೆಂಗಳೂರಿಗೆ ಹೋಗುತ್ತಿದ್ದೆವು. ನಮ್ಮ ಕಾರನ್ನು ನಾನು ಚಲಾಯಿಸುತ್ತಿದ್ದು, ನಾವು ಶ್ರೀರಂಗಪಟ್ಟಣ ಬಸ್ ಸ್ಟಾಂಡ್ ನ ಹತ್ತಿರ ಬಂದಾಗ ಒಂದು ಕೆ ಎಸ್ ಆರ್ ಟಿ ಸಿ ಬಸ್ ನ ಚಾಲಕ ಶ್ರೀರಂಗಪಟ್ಟಣದ ಕ್ರಾಸ್ ರೋಡ್ ನಿಂದ ಅತಿವೇಗ ಹಾಗೂ ಅಜಾಗರೂಕತೆಯಿಂದ ಬಂದಿರುತ್ತಾನೆ. ನಾವು ಶ್ರೀರಂಗಪಟ್ಟಣದಿಂದ ಬೆಂಗಳೂರು ಕಡೆಗೆ ಹೋಗುತ್ತಿದ್ದೆವು. ಸದರಿ ಬಸ್ ನ ಚಾಲಕ ನಮ್ಮ ಕಾರ್ ನ ಮುಂಭಾಗಕ್ಕೆ ಡಿಕ್ಕಿಪಡಿಸಿರುತ್ತಾರೆ. ಆಗ ನಾನು ಪ್ರಜ್ಞೆ ತಪ್ಪಿರುತ್ತೇನೆ. 10 ನಿಮಿಷ ಕಳೆದ

ನನಗೆ ಪ್ರಜ್ಞೆ ಬಂದಾಗ ಲಿಂಗೇಶ್ ಅನ್ನು ಟಾಟಾ ಏಸ್ ವಾಹನದಲ್ಲಿ ಹಾಕಿ ಆಸ್ಪತ್ರೆಗೆ ಸಾರ್ವಜನಿಕರು ಕಳುಹಿಸಿರುತ್ತಿದ್ದರು, ಕಿರಣ್ ಗೆ ಸಾರ್ವಜನಿಕರು ನೀರು ಕುಡಿಸುತ್ತಿದ್ದರು. ನನ್ನ ತಂದೆಗೆ ಸಣ್ಣ ಪುಟ್ಟ ಏಟುಗಳು ಆಗಿತ್ತು. ಅರುಣ್ ಗೆ ಕೈ ಮುರಿದು ಹೋಗಿದ್ದು ಹಾಗೂ ತಲೆಗೆ ಪೆಟ್ಟಾಗಿತ್ತು. ನಾನು ನನ್ನ ತಂದೆ ಮತ್ತು ಲಿಂಗೇಶ್ ಮತ್ತು ಕಿರಣ್ ಶ್ರೀರಂಗಪಟ್ಟಣದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ನಾವು ಅಲ್ಲಿ ಹೋಗಿ ವೈದ್ಯರು ಬಂದು ಕಿರಣ್ ಮತ್ತು ಲಿಂಗೇಶ್ ಮರಣ ಹೊಂದಿದ್ದಾರೆ ಎಂದು ತಿಳಿಸಿರುತ್ತಾರೆ. ಅವರ ಮೃತ ದೇಹದ ಪೋಸ್ಟ್ ಮಾರ್ಟಮ್ ಮಾಡಬೇಕೆಂದು ತಿಳಿಸಿರುತ್ತಾರೆ. ಅರುಣ್ ಅನ್ನು ಬೇರೆ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಲಿಂಗೇಶ್ ಗೆ ದೇಹದ ಮೇಲೆ ಹೆಚ್ಚು ಗಾಯ ಆಗಿರಲಿಲ್ಲ, ಆದರೆ internal ಗಾಯಗಳು ಆಗಿರಬಹುದು. ಕಿರಣ್ ಗೆ ತಲೆಗೆ ಪೆಟ್ಟಾಗಿತ್ತು ಹಾಗೂ ಮೈಕೈಗೆ ಪೆಟ್ಟಾಗಿತ್ತು. ಬಸ್ ಚಾಲಕ ತನ್ನ ಬಸ್ ಅನ್ನು ಯಾವುದೇ ಮುನ್ಸೂಚನೆ ನೀಡದೆ ಕ್ರಾಸ್ ರೋಡ್ ನಿಂದ ಮುಖ್ಯ ರಸ್ತೆಗೆ ಅತಿವೇಗ ಹಾಗೂ ಅಜಾಗರೂಕತೆಯಿಂದ ಬಂದು ಡಿಕ್ಕಿ ಪಡಿಸಿರುತ್ತಾರೆ. ನನ್ನ ಉಳಿದ ಕುಟುಂಬದವರು ಟೆಂಪೋ ಟ್ರಾವೆಲ್ಸ್ ನಲ್ಲಿ ಬರುತ್ತಿದ್ದು, ಅವರು ಕಾರಿನ ಹಿಂಭಾಗದಲ್ಲಿ ಇದ್ದರು. ಸಾಕ್ಷಿ ನ್ಯಾಯಾಲಯದಲ್ಲಿರುವ ಆರೋಪಿಯನ್ನು ನೋಡಿ ಗುರುತಿಸಿದ್ದು, ಅಪಘಾತವು ಆರೋಪಿಯ ತಪ್ಪಿನಿಂದ ಆಗಿರುತ್ತದೆ ಎಂದು ನುಡಿಯುತ್ತಾರೆ. ನಾನು ಪೊಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ. ನಾನು ಚಲಾಯಿಸುತ್ತಿದ್ದ ಕಾರ್ ಮತ್ತು ನಮಗೆ ಡಿಕ್ಕಿ ಪಡಿಸಿದ ಕಾರ್ ನಂಬರ್ ನನಗೆ ನೆನಪಿಲ್ಲ. ಸಾಕ್ಷಿ ನಿಪಿ 1 ಮತ್ತು 2 ಅನ್ನು ನೋಡಿ ಅಪಘಾತ ಪಡಿಸಿದ ಬಸ್ ಅದೇ ಎಂದು ಹಾಗೂ ತಾನು ಚಲಾಯಿಸುತ್ತಿದ್ದ ಕಾರ್ ಅದೇ ಎಂದು ಗುರುತಿಸಿರುತ್ತಾರೆ. ಸಾಕ್ಷಿ ನಿಪಿ 3 ಮತ್ತು 4 ಅನ್ನು ನೋಡಿ ಮೃತ ಲಿಂಗೇಶ್ ಹಾಗೂ ಕಿರಣ್ ಇರುವುದಾಗಿ ಗುರುತಿಸುತ್ತಾರೆ.

ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಎ ಪಿ ಪಿರವರು ಅನುಮತಿ ಕೋರುತ್ತಿದ್ದು , ಸಾಕ್ಷಿಯ ಸಾಕ್ಷ್ಯವನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.

ಪಾಟೀ ಸವಾಲು ಃ ಎ ಪಿ ಪಿ ರವರಿಂದಃ

3. ಅಪಘಾತವು ದಿಃ 12.03.2017 ರ 7.45 ಗಂಟೆಗೆ ಶ್ರೀರಂಗಪಟ್ಟಣ ಟೌನ್ ನ ಆರ್ ಎಂ ಸಿ ಗೇಟ್ ನ ಮುಂಭಾಗದಲ್ಲಿರುವ ಮೈಸೂರು- ಬೆಂಗಳೂರು ಮುಖ್ಯ ರಸ್ತೆಯಲ್ಲಿ ಆಗಿರುತ್ತದೆ ಎಂದರೆ ಸರಿ. ನಾನು ಚಲಾಯಿಸುತ್ತಿದ್ದ ಸ್ವಿಫ್ಟ್ ಕಾರ್ -22 ಎನ್ - 7405 ಎಂದರೆ ಸಾಕ್ಷಿ ನನಗೆ ಕೆಎ-22-ಎನ್ ಮಾತ್ರ ನೆನಪಿದೆ ಎಂದು ನುಡಿಯುತ್ತಾರೆ. ನಮಗೆ ಡಿಕ್ಕಿ ಪಡಿಸಿದ ಕೆ ಎಸ್ ಆರ್ ಟಿ ಸಿ ಬಸ್ ನನೋಂದಣಿ ಸಂಖ್ಯೆ ಕೆಎ-09-ಎಫ್-5223 ಎಂದರೆ 5223 ಮಾತ್ರ ನೆನಪಿದೆ ಎಂದು ನುಡಿಯುತ್ತಾರೆ. ಅಪಘಾತದ ದಿನ ಬಸ್ ಚಾಲಕ ತನ್ನ ಬಸ್ ಅನ್ನು ಆರ್ ಎಂ ಸಿ ಗೇಟ್ ನ ಮುಂಭಾಗದಿಂದ ಮೈಸೂರು- ಬೆಂಗಳೂರು ರಸ್ತೆಯ ಮಧ್ಯಭಾಗಕ್ಕೆ ಅತಿವೇಗ ಹಾಗೂ ಅಜಾಗರೂಕತೆಯಿಂದ ಬಂದು ಡಿಕ್ಕಿ ಪಡಿಸಿದ ಕಾರಣ ಅಪಘಾತವಾಗಿರುತ್ತದೆ ಎಂದರೆ ಸರಿ. ಸದರಿ ಅಪಘಾತ ಸಮಯದಲ್ಲಿ ಬಸ್ ಕಾರ್ ನ ಮುಂಭಾಗದಲ್ಲಿ ಹತ್ತಿರುತ್ತದೆ ಎಂದರೆ ಸರಿ. ನಮ್ಮ ಕಾರಿನಲ್ಲಿದ್ದ ಅರುಣ್ ಅನ್ನು ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ನಾರಾಯಣ ಹೃದಯಾಲಯಕ್ಕೆ ಕರೆದುಕೊಂಡು ಹೋಗಿರುತ್ತಾರೆ ಎಂದರೆ ಸರಿ. ದಿಃ 01.04.2017 ರಂದು ನಾನು ನನ್ನ ಹೇಳಿಕೆಯನ್ನು ನೀಡುವಾಗ ಪೊಲೀಸರು ಆರೋಪಿಯನ್ನು ನನಗೆ ತೋರಿಸಿ ಅಪಘಾತಪಡಿಸಿದ ವ್ಯಕ್ತಿ ಆತನೇ ಎಂದು ಹೇಳಿದ್ದು, ನಾನು ಗುರುತಿಸಿರುತ್ತೇನೆ ಎಂದರೆ ಸರಿ.

**ಆರೋಪಿ ಪರ ವಕೀಲರು ಗೈರು ಹಾಜರಾದ ಕಾರಣ, ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಗಿದೆ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.
ಓ ಹೇ ಕೆ ಸ ಇ ಒ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಶ್ರೀರಂಗಪಟ್ಟಣ.